ಇ) ದಿನಾಂಕ 30.11.1992ರವರೆಗೆ 1,38,414 ಅರ್ಜಿಗಳು ವಿಲೇವಾರಿಯಾಗಿವೆ.

ಈ) ದಿನಾಂಕ 30.11.1992ರವರೆಗೆ 18,296 ಹರಿಜನ–ಗಿರಿಜನರ ಅರ್ಜಿಗಳು ಮಾನ್ಯತೆ ಪಡೆದಿರುತ್ತವೆ.

ಉ) ಹೌದು. ಸರ್ಕಾರವು ಪ್ರತಿ ತಾಲ್ಲೂಕಿನಲ್ಲಿ ಪ್ರತಿ ತಿಂಗಳು ಕನಿಷ್ಠ ಪಕ್ಷ 100 ಅರ್ಜಿಗಳನ್ನಾದರೂ ವಿಲೇ ಮಾಡುವಂತೆ ನಿರ್ದೇಶನ ನೀಡಿದೆ.

ಭಾರಿ ಮಳೆಯಿಂದಾಗಿ ನಾಶವಾದ ಬೆಳೆಗಳ ಬಗ್ಗೆ

206 (211) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನವೆಂಬರ್ 17,18 ರಂದು ಬಿದ್ದ ಭಾರಿ ಮಳೆಯಿಂದಾಗಿ ಭಾರಿ ಪ್ರಮಾಣದಲ್ಲಿ ಕುಯ್ಲಿಗೆ ಬಂದ ಬೆಳೆ ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಎಕರೆ ಪ್ರದೇಶದಲ್ಲಿ ಬೆಳೆ ಹಾಳಾಗಿದೇ ?

ಇ) ಬೆಳೆ ನಾಶಕ್ಕೆ ಪ್ರತಿಯಾಗಿ ರೈತರಿಗೆ ಪರಿಹಾರವಾಗಿ ನೀಡಿರುವ ಹಣದ ಮೊತ್ತ ಎಷ್ಟು ?

ಈ) ಬೆಳೆ ಕಳೆದುಕೊಂಡ ರೈತರು ಸಹಕಾರಿ ಸಂಘ ಸಂಸ್ಥೆಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ಪಡೆದ ಸಾಲವನ್ನು ಮನ್ನಾ ಮಾಡುವ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಉ) ಸರ್ಕಾರದ ಅಂದಾಜಿನಂತೆ, ಒಂದು ಎಕರೆ ಪ್ರದೇಶದಲ್ಲಿ ಭತ್ತ:ರಾಗಿ:ಜೋಳ ಬೆಳೆಯಲು ರೈತನಿಗೆ ತಗಲುವ ವೆಚ್ಚವೆಷ್ಟು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ಬಂದಿದೆ.

ಆ) ಅನುಬಂಧ 'ಅ' ನಲ್ಲಿ ನೀಡಿದೆ.

ಇ) ಇದುವರೆಗೂ ರೂ. 42.81,909–00ಗಳನ್ನು ಪರಿಹಾರವಾಗಿ ರೈತರಿಗೆ ನೀಡಿದೆ.

ಈ) ಇಲ್ಲ. ಆದರೆ, ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವಾಗಿ ಪರಿವರ್ತಿಸಲಾಗುವುದು.

ಉ) ಒಂದು ಎಕರೆಗೆ ತಗಲುವ ವೆಚ್ಚ ಈ ಕೆಳಗಿನಂತಿದೆ:

	ರೂ.ಪೈ.
1. ಭತ್ತ–ಅಧಿಕ ಇಳುವರಿ (ನೀರಾವರಿ)	3541–00
2. ಭತ್ತ–ಅಧಿಕ ಇಳುವರಿ (ಮಳೆಯಾಶ್ರಯ)	2993–00
3. ಸ್ಥಳೀಯ ಭತ್ತ (ನೀರಾವರಿ)	2662–00

4. ಸ್ಥಳೀಯ ಭತ್ತ (ಮಳೆಯಾಶ್ರಯ)	2364–00
5. ಅಧಿಕ ಇಳುವರಿ ರಾಗಿ (ನೀರಾವರಿ)	2955–00
6. ಅಧಿಕ ಇಳುವರಿ ರಾಗಿ (ಮಳೆಯಾಶ್ರಯ)	1577–00
7. ಸ್ಥಳೀಯ ರಾಗಿ (ಮಳೆಯಾಶ್ರಯ)	891–00
8. ಹೈಬ್ರಿಡ್ ಜೋಳ (ನೀರಾವರಿ)	1681–00
9. ಹೈಬ್ರಿಡ್ ಜೋಳ (ಮಳೆಯಾಶ್ರಯ)	760–00
10. ಸ್ಥಳೀಯ ಜೋಳ (ಮಳೆಯಾಶ್ರಯ)	887–00

ಅನುಬಂಧ 'ಅ'

ಬೆಳೆ ಹಾನಿಯಾಗಿರುವ ಜಿಲ್ಲಾವಾರು ವಿವರಗಳು (ಲಕ್ಷ ಹೆಕ್ಟೇರ್‌ಗಳಲ್ಲಿ)

ಜಿಲ್ಲೆಯ ಹೆಸರು	ಬೆಳೆ ಹಾಳಾಗಿರುವ ಪ್ರದೇಶ (ಲಕ್ಷ ಹೆಕ್ಟೇರ್‌ಗಳಲ್ಲಿ)
1. ರಾಯಚೂರು	1.15
2. ಬಳ್ಳಾರಿ	0.47
3. ಧಾರವಾಡ	0.57
4. ಚಿತ್ರದುರ್ಗ	0.26
5. ಶಿವಮೊಗ್ಗ	0.18
6. ಚಿಕ್ಕಮಗಳೂರು	0.05
7. ಮೈಸೂರು	0.002
8. ಉತ್ತರ ಕನ್ನಡ	0.06
9. ದಕ್ಷಿಣ ಕನ್ನಡ	0.05
10. ಹಾಸನ	0.01
11. ಕೊಡಗು	0.02
12. ಬೆಳಗಾಂ	0.26
13. ಬಿಜಾಪುರ	0.02

14. ತುಮಕೂರು	0.03
ಒಟ್ಟು	3.132 ಲಕ್ಷ ಹೆಕ್ಟೇರ್‌ಗಳು

ಗೇಣಿ ರೈತರಿಂದ ಬರುವ ಹಣದ ರದ್ದತಿ

207 (103) ಶ್ರೀ ಗೋಪಾಲ ಎಂ. ಕಾನಡೆ (ಸಿರಸಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ಕರ್ನಾಟಕದಲ್ಲಿ ಗೇಣಿ ರೈತರಿಂದ ಬರುವ ಹಣವನ್ನು ರದ್ದುಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಪ್ರತಿಯೊಬ್ಬ ಅಧಿಭೋಗದ ಹಕ್ಕನ್ನು ನೋಂದಾಯಿಸಿಕೊಂಡಿರುವ ಗೇಣಿದಾರನು ಕರ್ನಾಟಕ ಭೂಸುಧಾರಣೆ ಕಾಯಿದೆ, 1961ರ ಕಲಂ 48(ಎ) ರ ಪ್ರಕಾರ ನಿಗದಿಪಡಿಸಿದ ಪ್ರೀಮಿಯಂ ಹಣವನ್ನು ಪಾವತಿ ಮಾಡಬೇಕಾಗುತ್ತದೆ. ಸದರಿ ಕಾಯಿದೆ ಕಲಂ 53ರ ಪ್ರಕಾರ ಪಾವತಿ ಮಾಡಬೇಕಾದ ಹಣ 2000 ರೂಪಾಯಿಗಳಿಗೆ ಮಾಡದಿದ್ದಲ್ಲಿ ಪ್ರೀಮಿಯಂ ಹಣವನ್ನು ಒಂದೇ ಕಂತಿನಲ್ಲಿ ಪಾವತಿ ಮಾಡಬೇಕಾಗುತ್ತದೆ. ಒಟ್ಟು ಹಣ 2000 ರೂ.ಗಳಿಗೆ ಮೀರಿದ್ದರೆ ಅದನ್ನು 20 ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡಬೇಕಾಗುತ್ತದೆ.

ಸರ್ಕಾರವು ಸದರಿ ಕಾಯಿದೆಯ ಕಲಂ 53ನ್ನು 1986 ಮತ್ತು 1991ರಲ್ಲಿ ತಿದ್ದುಪಡಿ ಮಾಡಿ ಗೇಣಿದಾರರುಗಳು ಹೊಂದಿದ ಒಟ್ಟು ಹಿಡುವಳಿ (ಸ್ವಂತ ಹಿಡುವಳಿ ಮತ್ತು ಗೇಣಿ ಕಾನೂನು ರೀತ್ಯ ಮಂಜೂರಾದ ಜಮೀನು) 10 ಎಕರೆಗಳಿಗೆ ಮೀರದ 'ಡಿ' ವರ್ಗಗಳ ಜಮೀನುಗಳಿಗೆ ಅಥವ ತತ್ಸಮಾನವಾದ ಇತರ ವರ್ಗಗಳ ಜಮೀನುಗಳಿಗೆ ಸಲ್ಲಿಸಬೇಕಾದ ಪ್ರೀಮಿಯಂ ಹಣದ ಕಂತುಗಳನ್ನು ರದ್ದುಪಡಿಸಿದೆ.

ಬೆಳಗಾವಿ ಜಿಲ್ಲೆಯಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಬಿಡುಗಡೆಯಾದ ಹಣ

209 (324) ಶ್ರೀ ಶಿವಾನಂದ ಕೌಜಲಗಿ (ಬೈಲಹೊಂಗಲ):– ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ ?

ಅ) ಬೆಳಗಾವಿ ಜಿಲ್ಲೆಯಲ್ಲಿ 1991–92ನೇ ಹಾಗೂ 1992–93ನೇ ಸಾಲಿನಲ್ಲಿ ಆರಾಧನಾ ಯೋಜನೆಯಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಯಿತು (ಪ್ರತಿಯೊಂದು ಮತದಾರ ಕ್ಷೇತ್ರದ ವಿವರ ಕೊಡುವುದು) ?

ಆ) 1991–92 ಹಾಗೂ 1992–93ನೇ ಸಾಲಿನಲ್ಲಿ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಮತದಾರ ಕ್ಷೇತ್ರಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಮತ್ತು ಅದನ್ನು ಯಾವ ಯಾವ ಕೆಲಸಕ್ಕೆ ಬಿಡುಗಡೆ ಮಾಡಲಾಗಿತ್ತು ?

ಇ) ಅದರಲ್ಲಿ ಎಷ್ಟು ಹಣ ಖರ್ಚಾಗಿರುವುದು ಹಾಗೂ ಯಾವ ಏಜೆನ್ಸಿ ಮುಖಾಂತರ ಖರ್ಚು ಮಾಡಲಾಗಿದೆ.